**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 36/2025**

| | | | |
|---|---|---|---|
| ಹೆಸರು | | ಶ್ರೀ ಮಂಜುನಾಥ | ಚಾಸಾಃ 04 |
| ತಂದೆ ಹೆಸರು | | ಶ್ರೀ ಪ್ರಭುಸ್ವಾಮಿ | ಪ್ರಾಸಾಃ 03 |
| ವಯಸ್ಸು | | 32 ವರ್ಷ | ಸಾಕ್ಷಿಯನ್ನು ದಿನಾಂಕಃ 22.01.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಸೋಮಹಳ್ಳಿ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ಸಾಕ್ಷಿಯು ನಿಪಿ2 ಮತ್ತು ನಿಪಿ3 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ2(ಬಿ) ಮತ್ತು ನಿಪಿ3(ಬಿ) ಎಂದು ಗುರುತಿಸಲಾಯಿತು. ನಿಪಿ2 ಕ್ಕೆ ಅಪಘಾತ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಿಪಿ3 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಅಪಘಾತಕ್ಕೆ ಒಳಗಾದ ವಾಹನಗಳನ್ನು ಅಮಾನತ್ತುಪಡಿಸಿಕೊಳ್ಳುವ ಕಾಲಕ್ಕೆ ನಿಪಿ3 ಕ್ಕೆ ಸಹಿ ಮಾಡಿರುತ್ತೇನೆ. ಆ ಕಾಲಕ್ಕೆ ಫೋಟೋಗಳನ್ನು ತೆಗೆದರು. ಅಪಘಾತಕ್ಕೆ ಒಳಪಟ್ಟ ವಾಹನಗಳನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ನಿಪಿ2 ನ್ನು ದಿಃ 03.10.2024 ರಂದು ಘಟನಾ ಸ್ಥಳದಲ್ಲಿ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಇತರ ಸಾಕ್ಷಿದಾರರಾದ ಚಾಸಾ-5 ರವರ ಸಮಕ್ಷಮ ಪೊಲೀಸರು ಮದ್ಯಾಹ್ನ

2.00 ರಿಂದ 2.45 ರವರೆಗೆ ಮಹಜರ್ ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿ. ಅದೇ ದಿನ ಚಾಸಾ–2 ರವರು ಅಪಘಾತಕ್ಕೆ ಒಳಗಾದ ವಾಹನಗಳನ್ನು ಗುರುತಿಸಿದ ಮೇರೆಗೆ ಕೆಎ–10–ಆರ್–3293 ಹೀರೋ ಹೋಂಡಾ ಸ್ಲೆಂಡರ್ ಪ್ಲಸ್ ಮೋಟರ್ ಸೈಕಲ್ ಅಪಘಾತಉಂಟುಮಾಡಿದ ವಾಹನ ಟಿಎನ್–77–ಇ–0936 ಸ್ವಿಪ್ಟ್ ಡಿಸೈನ್ ಕಾರನ್ನು ವಶಪಡಿಸಿಕೊಂಡರು ಎಂದರೆ ಸರಿ. ಸದರಿ ವಾಹನಗಳು ಜಖಂಗೊಂಡಿದ್ದವು ಎಂದರೆ ಸರಿ. ಸದರಿ ಮಹಜರ್ ಸಂಜೆ 4.45 ರಿಂದ 5.30 ರವರೆಗೆ ನನ್ನ, ಚಾಸಾ1 ಮತ್ತು ಚಾಸಾ–6 ರವರ ಸಮಕ್ಷಮ ಮಹಜರ್ ಜರುಗಿಸಿ ವಶಪಡಿಸಿಕೊಂಡರು ಎಂದರೆ ಸರಿ. ನಿಪಿ2 ಮತ್ತು 3 ರ ಕಾಲಕ್ಕೆ ನಿಪಿ4 ರಿಂದ ನಿಪಿ8 ರಂತೆ ಫೋಟೋಗಳನ್ನು ತೆಗೆದರು ಎಂದರೆ ಸರಿ. ನಿಪಿ2 ಮತ್ತು 3 ರ ವಿಷಯ ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**